


ಇನ್ನೇನು ಬಂದುಬಿಡುತಾರೆ... ಇಲ್ಲಿ ಕೂರಿ...' ಎಂದು ಹೇಳಿ, ಮೂಲೆಯಲ್ಲಿ ನಮ್ಮನ್ನು ಸೋಫಾಸೀನರನ್ನಾಗಿಸಿದಳು. ಮನೆಯನ್ನು ಅತ್ಯಾಸ್ಥೆಯಿಟ್ಟು ಅಗದಿ ವಿಶೇಷವಾಗಿ ಸಜ್ಜುಗೈಯಲಾಗಿತ್ತು. ತೂಗುದೀಪಗಳು.... ಗೂಡುಗಳಲ್ಲಿ ಪ್ರಣತಿಗಳು... ಹೂವಿನ ಗುಚ್ಛಾಲಂಕಾರ... ಮಾವಿನ ತೋರಣ... ಬಾಳೆಯ ಕಂದು ಕಟ್ಟಿದ ಮಂಟಪದೋಪಾದಿಯ ರಚನೆ ಬೇರೆ ನಡುವೆ! ಇಷ್ಟೆಲ್ಲ ಸಡಗರದ ಹಿನ್ನೆಲೆಯಲ್ಲಿ ಸಣ್ಣಗೆ ದನಿಯುತ್ತಿದ್ದ ನಾದಸ್ವರ; ಮಂಗಳನಾದ! ಆಶ್ಚರ್ಯವಾಯಿತು. 'ಹೇ ಜ್ಯಾಕಲಿನ್... ಏನು ವಿಶೇಷ? ನಿಮ್ಮ ಸಾಹೇಬರೇನಾದರೂ ಮದುವೆಗಿದುವೆ ಆಗುತಿದ್ದಾರಾ?' ಭಾರೀ ಕುತೂಹಲವಿಟ್ಟುಕೊಂಡು ಕೇಳಿದೆ. ಮಧುಕರಿ ನನ್ನ ಬದಿಗುಳಿತು, ಅವಳ ಉತ್ತರವನ್ನೇ ಎದುರುನೋಡಿದ. ಜ್ಯಾಕಲಿನ್ ಸಣ್ಣಗೆ ನಕ್ಕಳು. 'ನಮ್ಮ ಸರ್ ನಿಮ್ಮಿಬ್ಬರಿಗೆ ಸರ್ಪ್ರೈಸ್ ಕೊಡಬೇಕೂಂತಿದ್ದಾರೆ... ಇಲ್ಲಿ ಬಂದಿರೋರೆಲ್ಲ ನಿಮ್ಮಷ್ಟೇ ಅವರಿಗೂ ಗೊತ್ತಿರಲಿಕ್ಕಿಲ್ಲ. ಅವರಿಗೆ ಗೊತ್ತಿರೋರು ನೀವಿಬ್ಬರೇ ಅನಿಸುತ್ತೆ...' ಅಂತಂದು, ವಿಷಯವನ್ನು ಮತ್ತೂ ನಿಗೂಢಗೊಳಿಸಿದಳು.

ಅಷ್ಟರಲ್ಲಿ ಐವತ್ತೂ ಸಮಸ್ತ ಮಂದಿಯ ನಡುವೆ ದೊಂಬಿಯೆದ್ದಂತನ್ನಿಸಿತು. ಪಡಸಾಲೆಯಲ್ಲಿಡೀ ಒಮ್ಮಿಂದೊಮ್ಮೆ ಎಲ್ಲರ ಕೇಕೆಯೆದ್ದಿತು. ಚಪ್ಪಾಳೆಯಾಯಿತು. ನಾವಿಬ್ಬರೂ ಪರಮಾಶ್ಚರ್ಯದಿಂದ ಏನಾಯಿತೆಂದು ನೋಡುತ್ತಿರುವಾಗ, ಮೇಲುಮಹಡಿಯಲ್ಲಿನ ಒಳಮನೆಯಿಂದ ಅಲೇಕ್ಸ್ಯಬ್ರಹ್ಮ ಇಳಿದುಬರುತ್ತಿರುವುದು ಕಂಡಿತು. ಪಡಸಾಲೆಯ ಕಣ್ಣು ಮಹಡಿಯತ್ತಲೇ ನೆಟ್ಟಿತ್ತು. ಅವನು ಶೆರವಾನಿ ತೊಟ್ಟು, ತಲೆಗೊಂದು ರೇಶಿಮೆಯ ಮುಂಡಾಸನ್ನೂ ಇಟ್ಟು ಥೇಟು ಮದುವೆಗಂಡಿನ ಹಾಗೆ, ಅಲಂಕಾರಗೊಂಡಿದ್ದ! ಅರರೆ... ಇದೇನು ನಿಜಕ್ಕೂ ಮದುವೆಯೇ... ಅಂದುಕೊಳ್ಳುತ್ತಲೇ ಅದಿಬದಿಯನ್ನು ಗಮನಿಸಿದೆ. ಬಗುಲಿನಲ್ಲೊಬ್ಬ ಕನ್ನೆಯಿದ್ದಳು. ಕೈಹಿಡಿದಿದ್ದಳು. ಹೆಚ್ಚೇನೂ ಅಲಂಕಾರವಿದ್ದಿರಲಿಲ್ಲ. ದಾವಣಿಯೆನಿಸುವ – ಆದರೆ ಅದಲ್ಲದ ಹಾಗೆ ಸೀರೆಯುಟ್ಟಿದ್ದಳು. ಮುಡಿಯನ್ನು ಇಬ್ಭಾಗಿಸುವ ಬೈತಲೆಯಲ್ಲಿ ನಡುವೊಂದು